

# ಹದಿಹರೆಯದ ಒಪ್ಪಿತ ಸಂಬಂಧ ತಪ್ಪೇ?

ಪ್ರೌಢಾವಸ್ಥೆಗೆ ಹೆಜ್ಜೆ ಇಟ್ಟ ಮಕ್ಕಳು ದೈಹಿಕವಾಗಿ ವೇಗವಾಗಿ ಬೆಳೆಯುತ್ತಿರುತ್ತಾರೆ. ದೇಹದಲ್ಲಿ ಆಗುತ್ತಿರುವ ಲೈಂಗಿಕ ಬೆಳವಣಿಗೆಯನ್ನೂ ಗುರುತಿಸುವ ತವಕ ಹೆಚ್ಚಾಗುತ್ತದೆ. ಈ ವಿಷಯದಲ್ಲಿ ಗೌಪ್ಯತೆಯ ಮಾತುಕತೆ, ತಮ್ಮ ದೇಹದಲ್ಲಿ ಆಗುತ್ತಿರುವ ಜೈವಿಕ ಬದಲಾವಣೆ ಆಕರ್ಷಣೆಯ ಕೇಂದ್ರವಾಗುತ್ತದೆ. ವಕೀಲೆ ಇಂದಿರಾ ಜೈಸಿಂಗ್ ಟೀನೇಜ್ ಲೈಂಗಿಕ ಸಂಬಂಧ ಅಪರಾಧವೇ ಎನ್ನುವ ಪ್ರಶ್ನೆ ಎತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹದಿಹರೆಯದ ಮಕ್ಕಳ ಲೈಂಗಿಕ ಸಂಬಂಧ ಮತ್ತು ಅವರಲ್ಲಿ ಜಾಗೃತವಾಗುವ ಲೈಂಗಿಕ ಅನ್ವೇಷಣೆಯ ಗುಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ. ಅವರು ವಿಶ್ಲೇಷಿಸಿದ್ದಾರೆ.

■ ನಿರೂಪಣೆ: **ಆರ್ಕೆ ತೊಗರ್ಸಿ**

ಹದಿಹರೆಯದ ಲೈಂಗಿಕತೆ ಅಪರಾಧವೇ ಎನ್ನುವುದು ತುಂಬ ಸೂಕ್ಷ್ಮ ಪ್ರಶ್ನೆ. ಇತ್ತೀಚೆಗೆ ಅದು ಹೆಚ್ಚಾಗಿ ಚರ್ಚೆ ಆಗುತ್ತಿದೆ. ಅದಕ್ಕೆ ಕಾರಣ, ನಾವು 2012ರಲ್ಲಿ ಜಾರಿಗೆ ತಂದಿರುವ ಪೋಕ್ಸೊ ಕಾಯ್ದೆ. ಅದರ ಉದ್ದೇಶ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವುದಾಗಿತ್ತು. ಕಾಯ್ದೆ ತುಂಬ ಪ್ರಬಲವಾಗಿದ್ದರಿಂದ ಆ ಬಗ್ಗೆ ಹಲವು ವಲಯಗಳಲ್ಲಿ ಆಕ್ಷೇಪದ ದನಿ ಕೂಡ ಕೇಳುತ್ತಿದೆ. ಹದಿಹರೆಯದ ಮಕ್ಕಳ ಒಪ್ಪಿತ ಸಂಬಂಧ ಪೋಕ್ಸೊ ಅನುಸಾರ ಅಪರಾಧ. ಇಂತಹ ಅಪರಾಧೀಕರಣ ತಪ್ಪಿಸಬೇಕು ಎನ್ನುವುದೇ ಹೊಸ ಚರ್ಚೆಯ ಹುಟ್ಟಿಗೆ ಕಾರಣವಾಗಿದೆ.

ಟೀನೇಜ್ ಒಪ್ಪಿತ ಲೈಂಗಿಕ ಸಂಬಂಧವನ್ನು ಶಿಕ್ಷೆಗೆ ಗುರಿಪಡಿಸುವುದರಿಂದ ಅವರ ಜೀವನವೇ ಸಂಪೂರ್ಣ ಹಾಳು ಮಾಡಿದಂತೆ ಆಗುತ್ತದೆ ಎಂದು ಅನೇಕ ಅಧ್ಯಯನಗಳು ಹೇಳಿವೆ. ಹೈಕೋರ್ಟ್‌ಗಳು ಅನೇಕ ಪ್ರಕರಣಗಳನ್ನು ಇತ್ಯರ್ಥ ಮಾಡುವ ಸಂದರ್ಭದಲ್ಲಿ ದೂರನ್ನೇ ರದ್ದುಗೊಳಿಸಿವೆ. ಅದು ಅತ್ಯಾಚಾರ ಅಲ್ಲ. ಪರಸ್ಪರ ಒಪ್ಪಿತ ಲೈಂಗಿಕ ಸಂಬಂಧ. ರೇಪ್ ಎಂದು ಪರಿಗಣಿಸಿದರೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ. ಪ್ರಕರಣದಲ್ಲಿ ಸಿಲುಕಿದವರನ್ನು ಆರೋಪ ಮುಕ್ತಗೊಳಿಸಿದೆ.